ರಾಜ್ಯದಲ್ಲಿರುವ ಪುರಸಭೆಗಳ ಬಗ್ಗೆ

4738 - ಶ್ರೀ ಬಚ್ಚೇಗೌಡ ಬಿ.ಎನ್ (ಹೊಸಕೋಟೆ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿರುವ ಪುರಸಭೆಗಳ ಸಂಖ್ಯೆ ಎಷ್ಟು? ಇವು ಆರ್ಥಿಕ ಮುಗ್ಗಟ್ಟಿನಿಂದ ಸೊರಗುತ್ತಿರುವುದು ಸರ್ಕಾರಾದ ಗಮನಕ್ಕೆ ಬಂದಿದೆಯೇ?*

ಆ) *ಪುರಸಭೆಗಳ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿ ಅಭಿವೃದ್ಧಿಪಡಿಸಲು ಸರ್ಕಾರ ಮುಂದೆ ಹಣ ಒದಗಿಸಲು ಏನಾದರೂ ಪ್ರಸ್ತಾವನೆ ಇದೆಯೆ?*

ಇ) *ಪೌರ ಸಂಸ್ಥೆಗಳ ಅಭಿವೃದ್ಧಿಗೆ ರೂ. 50 ಲಕ್ಷಗಳನ್ನು ಕೊಡುವುದಾಗಿ ಮತ್ತು ಈ ಹಣ ಕಾಸಿಗೆ ಹೂಡ್ಕೋ ಸಂಸ್ಥೆಯಿಂದ ಸಾಲ ಪಡೆಯುವ ಯೋಜನೆ ಯಾವ ಹಂತದಲ್ಲಿದೆ?*

ಈ) *ಈ ರೂ. 50 ಲಕ್ಷಗಳು ಎಂದು ಬಿಡುಗಡೆ ಮಾಡಲಾಗುವುದು?*

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು 82 ಪುರಸಭೆಗಳು ಇವೆ. ಇವುಗಳಲ್ಲಿ ಕೆಲವು ಪುರಸಭೆಗಳು ಆರ್ಥಿಕ ಮುಗ್ಗಟ್ಟು ಹೊಂದಿವೆ.

ಆ) ಇದೆ.

ಇ) ರಾಜ್ಯದಲ್ಲಿರುವ ನಗರ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಸಲುವಾಗಿ ಹುಡ್ಕೋ ಸಂಸ್ಥೆಯಿಂದ ರೂ.100 ಕೋಟಿಗಳನ್ನು ಸಾಲದ ರೂಪವಾಗಿ ಪಡೆಯಲು ಉದ್ದೇಶಿಸಿ ಒಪ್ಪಂದ ಮಾಡಿಕೊಳ್ಳಲಾಗಿದೆ. ಆದರಂತೆ ಈಗಾಗಲೇ 123 ಸ್ಥಳೀಯ ಸಂಸ್ಥೆಗಳ ಕಾಮಗಾರಿಗಳಿಗೆ ಮಂಜೂರಾತಿಯನ್ನು ನೀಡಲಾಗಿದೆ.

ಈ) ಸದ್ಯದಲ್ಲಿಯೇ.

ರಾಜ್ಯದಲ್ಲಿ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಯು ಮುಗಿಸಿರುವ ಯೋಜನೆಗಳ ಸಂಖ್ಯೆ

4739 - ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಪಟ್ಟಣ ಪ್ರದೇಶಗಳಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯಿಂದ ಇದುವರೆವಿಗೆ ಮುಗಿಸಿ ನೀರು ಒದಗಿಸಿರುವ ಪಟ್ಟಣಗಳ ಸಂಖ್ಯೆ ಎಷ್ಟು? ಅದಕ್ಕೆ ತಗಲಿದ ವೆಚ್ಚ ಎಷ್ಟು?*

ಆ) *ಈ ಹಾಲಿ ಮಂಡಲಿ ವತಿಯಿಂದ ಎಷ್ಟು ಯೋಜನೆಗಳ ಕಾರ್ಯ ನಡೆಯುತ್ತಿದೆ? ಅವು ಯಾವ ಹಂತದಲ್ಲಿದೆ? ಇದುವರೆವಿಗೆ ಈ ಯೋಜನೆಗಳಿಗೆ ಒದಗಿಸಿರುವ ಹಣ ಎಷ್ಟು?*